ನಂದೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 65.

ಮೃತಪಟ್ಟ ದೇವಾಂಗದ ಸೊಂಡೇಕೊಪ್ಪದ ನರಸಿಂಹಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ರಣವೀರಪೆಟ್ಟ್ಯ ಪೇಟೆಯಲ್ಲಿರುವ ಭೋಗದ ನರಸಿಂಹಯ್ಯ ಮೈನರ್ ಗಾರ್ಡಿಯರ್ 1ನೇ ರಾಯಿ ರಾಮಕ್ಕ, 2ನೇ ಮಲತಾಯಿ ಮುನಿಯಮ್ಮ ಈಮೃತಪಟ್ಟ ಸದರೀ ಸೊಂಡೆಕೊಪ್ಪದ ನರಸಿಂಹಯ್ಯನವರಿಗೆ ಹೆಂಡತಿಯರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ರಣವೀರಪೆಟ್ಟ್ಯ ಪೇಟೆ ಸ್ಥಳದ ಭೋಗದ ನರಸಿಂಹಯ್ಯ ಮೈನರ್ ಗಾರ್ಡಿಯರ್ 1ನೇ ರಾಮಕ್ಕ, 2ನೇ ಮುನಿಯಮ್ಮ ಡಿಟೋ ಪೇಟೆ ವಾಸಸ್ಥರಾಗಿ ಮೃತಪಟ್ಟ ಸೊಂಡೆಕೊಪ್ಪದ ನರಸಿಂಹಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಪ್ರೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ರಾಮಕ್ಕ, 2ನೇ ಮುನಿಯಮ್ಮ ಇವರ ಅರ್ಜಿಯನ್ನು 1896ನೇ ಇಸವಿ ಡಿಸೆಂಬರ್ ತಿಂಗಳ ತಾರೀಖು 17ರಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೊಂಡೆಕೊಪ್ಪದ ನರಸಿಂಹಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ನವಂಬರ್ ತಿಂಗಳ 13ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಃ ನಮ್ಮದಸ್ಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರಾಸ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟ್.

ಇ ಸ್ತಿ ಹಾ ರ್.

ತಾರೀಖು 23ನೇ ನವಂಬರ್ 1896.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೆಂಗಳೂರು ಸಿಟಿ. ಕಬ್ಬನ್ ಸಾಹೇಬರ ಪ್ಯಾಟೆಗೆ ಕೇರಿದ ಗುಂಮಟದಲ್ಲಿದ್ದು ಜೇವಾರ್ಸ್ ತರೀಕ್ ಮೃತಪಟ್ಟ ಸುಲ್ತಾನಮ್ಮನೆಂಬವಳ ಬಾಬತು ಏರ್ಜ್ ಗುಮ್ಮಟದ 5ನೇ ನಂಬರ್ ಗಲ್ಲಿಸುಲ್ಲಿರುವ ಮ್ಯುನಿಸಿಪಲ್ ನಂಬರ್ 3, 4, 5, 6, 7, 8 ಮತ್ತು ಲಂಗಡಾ ಹುರ್ಸ್‌ಸಾಬಿ ಗಲ್ಲಿಯಲ್ಲಿ ಇರುವ ನಂಬರ್ 4 ಈ ನಂಬರ್‌ಗಳುಳ್ಳ ಮನೆಗಳನ್ನು ಏರ್ಜ್ ಮನೆಗಳ ಬಯಲ್ಲೆ ಬೆಂಗಳೂರು ತಾಲ್ಲೂಕು ಅಮಲ್ದಾರ್ ರೂಬರೂ ಸ್ ಮಜಕೂರು ಡಿಸೆಂಬರ್ ಮಾಹೆ 14ನೇ ತಾರೀಖು ದಿನ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆಯಾಗಿ ಆ ಕಾಲಕ್ಕೆ ಸರಿಯಾಗಿ ಖಾಯಿಷ್ಮಾಡತಕ್ಕವರು ಹಾಜರಾಗಿ ಛಡಸವಾಲ್ಮಾಡಿ ತೆಗದುಕೊಳ್ಳಬಹುದು. ಆ ರೀತಿ ತೆಗದುಕೊಂಡವರು ಹರಾಜ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಹಾಜರ್ಮಾಡಬೇಕು. ತರುವಾಯು 15 ದಿವಸಗಳೊಳಗಾಗಿ ಪೂರಾ ಮೊಬಲಗು ಹಾಜರ್ಮಾಡಬೇಕು. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರಿಂದ ಹರಾಜ್ ಮಂಜೂರಾಗಿ ಬಂದ ಬಳಿಕ ಮನೆಗಳು ಹರಾಜಿನಲ್ಲಿ ಪಡದವರ ಸುಪರ್ದು ಮಾಡಲಾದೀತು.

ಮೇಲೆ ನಮೂದಿಸಿರುವ ಡಿಪಾಜಿಟ್ ಮತ್ತು ಪೂರಾ ಮೊಬಲಗು ಹಾಜರ್ಮಾಡದೆ ತಪ್ಪಿದಲ್ಲಿ ಪುನಹಾ ಹರಾಜ್ ಮಾಡಲ್ಪಡುತ್ತೆ. ಲಕ್ಸಾ ಆದಲ್ಲಿ ಕಮ್ಮಿ ಬೀಳುವ ಮೊಬಲಗ್ಗೆ ಮೊದಲನೇ ಛಡಸವಾಲ್‌ದಾರನನ್ನು ಗುರಿಪಡಿಸಲ್ಪಡುತ್ತ.

ಎಂ. ಅಂಣಾಜಿರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.

ಫಾರೆಸ್ಟ್ ಇಲಾಖಾ.

ನೋ ಟಿ ಸ್.

ತಾರೀಖು 2ನೇ ಸೆಪ್ಟಂಬರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲಿಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಸ್ಥಳಗಳಲ್ಲಿ ಆವುಗಳ ಪಕ್ಕದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ಮತ್ತು ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವುವು.

ಡಿಸ್ಟ್ರಿಕ್ಟ್.	ಕೋಠಿ ಹೆಸರು.	ಹರಾಜು ತಾರೀಖು.
ಮೈಸೂರು	ಹುಣಸೂರು	28ನೇ ನವಂಬರ್ 1896.
ಡಿಟೋ	ಶ್ರೀರಂಗಪಟ್ಟಣ	1ನೇ ಡಿಸೆಂಬರ್ ,,
ಬಂಗಳೂರು	ಬೆಂಗಳೂರು	4ನೇ ಡಿಟೋ ,,
ಹಾಸನ	ಹಾಸನ	7ನೇ ಡಿಟೋ ,,
ಕಡೂರು	ಚಿಕ್ಕಮಗಳೂರು	10ನೇ ಡಿಟೋ ,,
ಶಿವಮೊಗ್ಗಾ	ಶಿವಮೊಗ್ಗಾ	15ನೇ ಡಿಟೋ ,,
ಡಿಟೋ	ಸಾಗರ	18ನೇ ಡಿಟೋ ,,
ಡಿಟೋ	ತೀರ್ಥಹಳ್ಳಿ	22ನೇ ಡಿಟೋ ,,

2. ಈ ವರುಷ (i) ಬೆಂಗಳೂರು, ಹಾಸನ, ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ್ ಕೋಠಿಗಳಲ್ಲಿ ಹಳೇ ತರಹೆ ಪ್ರಕಾರವೂ (ii) ಆಜಮಾಯಿಷಿ ಬಗ್ಯೆ ಮೈಸೂರು ಡಿಸ್ಟ್ರಿಕ್ಟ್ ಕೋಠಿಗಳಲ್ಲಿ ಹೊಸ ಯಾ ಬೊಂಬಾಯಿ ತರಹೆ ಪ್ರಕಾರವೂ ಯರಡು ವಿಧವಾಗಿ ಸಂದಲನ್ನ ರಾಸು ಮಾಡಿಸಿರುತ್ತೆ.

3. ಇದುವರಿಗೂ ಜಾರಿಯಲ್ಲಿರುವ ವಜನಿ ಬಟ್ಟುಗಳೇ ಈಗಲೂ ಉಪಯೋಗಿಸಲ್ಪಡುವವು.

4. ಪ್ರತಿ ಕೋಠಿಯಲ್ಲಿಯು ಒಕ್ಕಾ ಬಗ್ಯೆ ವದಗಿಸಲ್ಪಡುವ ಸಂದಲಿನ ತರಹೆಗಳ ಮೊತ್ತವನ್ನ ಇದರಡಿ ವಿವರಿಸಿದೆ.